ಇಂಗ್ಲಿಷ್ ಕಲಿಯಲಿಲ್ಲ ಎಂದರೆ ಉದ್ಯೋಗ ಸಿಗುವುದಿಲ್ಲ ಎನ್ನುವ ವಾದ ಇದೆ. ಅದಕ್ಕೆ ಇಂಗ್ಲಿಷ್ ಮಾಧ್ಯಮದಲ್ಲಿ ಮಕ್ಕಳನ್ನು ಓದಿಸುತ್ತಿದ್ದೇವೆ. ಶಿಕ್ಷಣವನ್ನು ಅನ್ಯಭಾಷಾ ಮಾಧ್ಯಮದಲ್ಲಿ ತುರುಕುವ ಕೆಲಸ ಆಗಬಾರದು. ಉದ್ಯೋಗದ ದೃಷ್ಟಿಯಿಂದ ಅಂತರರಾಷ್ಟ್ರೀಯ ಸಂವಹನ ಭಾಷೆ ಕಲಿಸಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಉದ್ಯೋಗಕ್ಕೆ ಬೇಕಾದ ತರಬೇತಿ ಹೇಗೆ ಕೊಡುತ್ತೇವೋ ಅಂತೆಯೇ ಭಾಷೆ ಕಲಿಸಲೂ ತರಬೇತಿ ಕೊಡಲು ಸಾಧ್ಯ. ಚೆನ್ನಾಗಿ ಇಂಗ್ಲಿಷ್ ಬಲ್ಲ ಅಧ್ಯಾಪಕರಿಂದ ಶಿಕ್ಷಣ ಕೊಡಿಸಿ ಉದ್ಯೋಗಕ್ಕೆ ಸಜ್ಜುಗೊಳಿಸುವ ಕೆಲಸವನ್ನು ಸರ್ಕಾರವೇ ಮಾಡಬೇಕು.

ಉದ್ಯೋಗ ಸಂಬಂಧಿಸಿದಂತೆ 'ಸರೋಜಿನಿ ಮಹಿಷಿ ವರದಿ'ಯಲ್ಲಿ ಸಾಕಷ್ಟು ವಿಚಾರಗಳು ಪ್ರಸ್ತಾಪ ಆಗಿವೆ. ಅದನ್ನು ಸರ್ಕಾರ ಅಂಗೀಕರಿಸಿ 40 ವರ್ಷಗಳು ಕಳೆದಿವೆ. ವಿಷಾದದ ಸಂಗತಿ ಅಂದರೆ, ಅದಕ್ಕೆ ಇದುವರೆಗೆ ಶಾಸನ ಬದ್ಧತೆ ಸಿಕ್ಕಿಲ್ಲ. ಅದಕ್ಕೆ ಇವತ್ತಿನ ಸನ್ನಿವೇಶಕ್ಕೆ ಅಗತ್ಯ ಬದಲಾವಣೆಯನ್ನು ಮಾಡಬೇಕಿದೆ. ಅದನ್ನು ಪರಿಷ್ಕರಿಸಲು ಸರ್ಕಾರವೇ ಸೂಚಿಸಿತ್ತು. ಎಲ್. ಹನುಮಂತಯ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ರಚನೆಯಾದ ಪರಿಷ್ಕರಣಾ ಸಮಿತಿ ಎಸ್.ಜಿ. ಸಿದ್ದರಾಮಯ್ಯ ಅಧ್ಯಕ್ಷರಾದ ವೇಳೆ ವರದಿಯನ್ನೂ ಕೊಟ್ಟಿದೆ. ಆ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ. ಸರ್ಕಾರ ಅದನ್ನು ಸದನದಲ್ಲಿ ಮಂಡಿಸದ ಕಾರಣ ಶಾಸನ ಆಗಿಲ್ಲ. ಹಾಗಾಗಿ ಸರ್ಕಾರ ಬದ್ಧವಾದ ನಿಲುವು ತಾಳಬೇಕು. ಸರ್ಕಾರಿ ವಲಯದಂತೆಯೇ ಖಾಸಗಿ ವಲಯದಲ್ಲಿಯೂ ಕಟ್ಟುನಿಟ್ಟಾಗಿ ಪಾಲಿಸಬೇಕು. ರಾಜ್ಯದ ಎಲ್ಲ ಸೌಲಭ್ಯವನ್ನು ಪಡೆಯುವ ಖಾಸಗಿ ಸಂಸ್ಥೆಗಳಿಗೆ ಇಂತಹ ಷರತ್ತು ಹಾಕಲು ಯಾವ ತೊಂದರೆಯೂ ಆಗುವುದಿಲ್ಲ. ಕೆಲ ರಾಜ್ಯಗಳಲ್ಲಿ ಇದು ಯಶಸ್ವಿಯಾಗಿದೆ. ಆ ದೃಷ್ಟಿಯಲ್ಲಿ ಕರ್ನಾಟಕ ಸರ್ಕಾರ ಕಟ್ಟುನಿಟ್ಟಾಗಿ ವರದಿ ಜಾರಿಗೆ ಒತ್ತುಕೊಡಬೇಕು.

> ಉದ್ಯೋಗಕ್ಕೆ ಸಂಬಂಧಿಸಿದಂತೆ 'ಸರೋಜಿನಿ ಮಹಿಷಿ ವರದಿ'ಯಲ್ಲಿ ಸಾಕಷ್ಟು ವಿಚಾರಗಳು ಪ್ರಸ್ತಾಪ ಆಗಿವೆ. ಅದನ್ನು ಸರ್ಕಾರ ಅಂಗೀಕರಿಸಿ 40 ವರ್ಷಗಳು ಕಳೆದಿವೆ. ವಿಷಾದದ ಸಂಗತಿ ಅಂದರೆ, ಅದಕ್ಕೆ ಇದುವರೆಗೆ ಶಾಸನ ಬದ್ಧತೆ ಸಿಕ್ಕಿಲ್ಲ. ಇವತ್ತಿನ ಸನ್ನಿವೇಶಕ್ಕೆ ಅಗತ್ಯ ಬದಲಾವಣೆ ಮಾಡಬೇಕಿದೆ.

**◆ ಭಾಷಾ ಚಳವಳಿಯಲ್ಲಿ ಭಾಗಿಯಾಗಬೇಕಾದ ಕಸಾಪ ತನ್ನ ಜವಾಬ್ದಾರಿ ಮರೆತಿದೆ ಅನ್ನಿಸುವುದಿಲ್ಲವೇ? ಸಮ್ಮೇಳನ ಮತ್ತು ದತ್ತಿ ಪ್ರಶಸ್ತಿ ಕೊಡುವುದಕ್ಕಷ್ಟೇ ಮಿತಿ ಹಾಕಿಕೊಂಡರೆ ಹೇಗೆ?**

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ ಪ್ರಸಾರದ ಜೊತೆ ಕಾವಲು ಸಮಿತಿಯಂತೆ ಕೆಲಸ ಮಾಡಬೇಕು. ನನ್ನ ಪ್ರಕಾರ ಕನ್ನಡಕ್ಕೆ ಎಲ್ಲಿ ಧಕ್ಕೆ ಆಗುತ್ತದೆಯೋ ಅದನ್ನು ಗುರುತಿಸಬೇಕು. ಚಳವಳಿ ಮತ್ತು ಕನ್ನಡ ಹೋರಾಟಗಾರರ ಜೊತೆ ಪರಿಷತ್ತು ಭಾಗಿಯಾಗಬೇಕು. ಪರಿಷತ್ತು ವಾಸ್ತವದಲ್ಲಿ ಸ್ವಾಯತ್ತ ಸಂಸ್ಥೆಯಾಗಿಯೇ ಇರಬೇಕು. ಸರ್ಕಾರ ದಾರಿ ತಪ್ಪಿದರೆ ಅದಕ್ಕೆ ಬುದ್ಧಿ ಹೇಳುವ ಪ್ರಜ್ಞೆ ಪರಿಷತ್ತಿಗೆ ಇರಬೇಕು. ಅಷ್ಟು ಸ್ವಾತಂತ್ರ್ಯ ಪರಿಷತ್ತಿಗೆ ಇದೆ ಎಂದು ನಾನು ಭಾವಿಸಿದ್ದೇನೆ. ಪರಿಷತ್ತಿನ ಸ್ವಾತಂತ್ರ್ಯಕ್ಕೆ ಸರ್ಕಾರ ಕೂಡ ಎಲ್ಲೂ ಅಡ್ಡಿ ಮಾಡಿಲ್ಲ ಎನ್ನುವುದು ನನ್ನ ಅನುಭವ. ಸರ್ಕಾರ ಪರಿಷತ್ತಿಗೆ ಅನುದಾನ ಕೊಡುತ್ತದೆ ಎನ್ನುವ ಹಂಗಿನ ಅಗತ್ಯ ಇಲ್ಲ. ಅದು ಸರ್ಕಾರದ ಕೆಲಸವೇ ಹೊರತು ದಾಕ್ಷಿಣ್ಯ ಅಲ್ಲ. ಪರಿಷತ್ತು ದಾಕ್ಷಿಣ್ಯ–ಹಂಗಿಗೆ ಒಳಗಾಗದೆ, ಕನ್ನಡಿಗರಿಗಾಗಿ ಹೋರಾಟ ಮಾಡುವ ದಿಟ್ಟತನವನ್ನು ಎಲ್ಲ ಕಾಲದಲ್ಲೂ ತೋರಿಸಬೇಕಾಗುತ್ತದೆ.

**◆ ಕನ್ನಡ ಸಾಹಿತ್ಯ ಪರಿಷತ್ತಿನ ವೆಬ್‌ಸೈಟಿನಲ್ಲಿಯೇ ನಿಮ್ಮ ಪರಿಚಯವನ್ನು 'ಜಾನಪದ ಸಾಹಿತಿ' ಎಂದು ಆರಂಭಿಸಿದ್ದಾರೆ. ನಾಡಿನ ಉದ್ದಗಲಕ್ಕೂ ಈ ರೀತಿಯ ದೋಷವನ್ನು ಸರಿಪಡಿಸಲು ಯಾವ ರೀತಿಯ ಕಾರ್ಯಯೋಜನೆ ಹಾಕಿಕೊಳ್ಳಬಹುದು?**

ಜಾನಪದ ತಜ್ಞ, ವಿದ್ವಾಂಸ ಎನ್ನುವುದಕ್ಕಿಂತ ನನ್ನನ್ನು ನಾನು ಜಾನಪದ ಕಾರ್ಯಕರ್ತ ಎಂದು ಹೇಳಲು ಇಷ್ಟಪಡುತ್ತೇನೆ. ಸಾಧಾರಣವಾದ ಕೆಲಸವನ್ನು ಮಾಡಿದ್ದೇನೆ. ಗ್ರಾಮೀಣ ಪ್ರದೇಶದಲ್ಲಿ ಬೆಳೆದಿದ್ದರಿಂದ ಜಾನಪದದ ಮೇಲೆ ಸಹಜವಾಗಿ ಒಲವು ಮೂಡಿತು. ಹಳ್ಳಿಯ ಜನ ತಮ್ಮ ಶ್ರಮ, ಬಡತನದ ನಡುವೆ ಖುಷಿಯಿಂದ ಹಾಡಿ ಕುಣಿದು ಬದುಕುತ್ತಿದ್ದರು. ಅದು ಅಮೂಲ್ಯ ಸ್ವತ್ತು ಎಂದು ನಾನು ಭಾವಿಸುತ್ತೇನೆ. ಜಾನಪದದಲ್ಲಿ ಕರೀಂಖಾನ್, ಕೆ.ಆರ್. ಲಿಂಗಪ್ಪ, ಜೀ.ಶಂ. ಪರಮಶಿವಯ್ಯ ಅವರ ಕೆಲಸವನ್ನು ನೋಡಿದ್ದೇನೆ. ಹಾಡಿನಿಂದ ಆಕರ್ಷಿತನಾಗಿ ನಾನೇ ಒಂದಿಷ್ಟು ಹಾಡುಗಳನ್ನು ಸಂಗ್ರಹ ಮಾಡಿ 'ಗ್ರಾಮ ಗೀತೆಗಳು' ಪ್ರಕಟಿಸಿದೆ. ಜಾನಪದ ಕ್ಷೇತ್ರದಲ್ಲಿ ಹೆಚ್ಚು ತೊಡಗಿದಂತೆ ಆ ಒಲವು ವಿಸ್ತಾರವಾಯಿತು.

ನಮ್ಮೂರು ತರೀಕೆರೆ ತಾಲ್ಲೂಕಿಗೆ ಸೇರಿತ್ತು, ಈಗ ಅಜ್ಜಂಪುರಂ. ಆಗ ತರೀಕೆರೆಯಲ್ಲಿ ಪ್ರಥಮ ರಾಜ್ಯ ಜನಪದ ಸಾಹಿತ್ಯ ಸಮ್ಮೇಳನ ಮಾಡಿದೆವು. ಆ ಸಂದರ್ಭದಲ್ಲಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಕೃತಿಯನ್ನು ರಚಿಸಿದೆ. ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕವೂ ಜಾನಪದ ಕೆಲಸ ಆಯಿತು. 10 ಸಾವಿರ ಜಾನಪದ ಕಲಾ ತಂಡದ ವಿವರ ಸಂಗ್ರಹಿಸಲು ಸಾಧ್ಯ ಆಯಿತು. ಜಿಲ್ಲಾವಾರು ಜಾನಪದ ಸಮ್ಮೇಳನ ಮಾಡಿದೆವು. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಕಲಾಮೇಳ ರೂಪಿಸಿದೆವು. ಆಗಲೇ 'ಕರ್ನಾಟಕ ಜನಪದ ಕಲೆಗಳು' ಗ್ರಂಥ ರಚನೆಯಾಯಿತು.

ಅಳಿದು ಹೋಗುತ್ತಿರುವ ಆಸ್ತಿಯೆಲ್ಲ ದಾಖಲೀಕರಣ ಆಗಬೇಕಿದೆ. ಆಧುನಿಕ ತಂತ್ರಜ್ಞಾನ ಕಾಲದಲ್ಲಿ ಅದಕ್ಕೆ ಹೆಚ್ಚು ಅನುಕೂಲ ಇದೆ. ಜಾನಪದ ವಿಶ್ವವಿದ್ಯಾಲಯ ತ್ವರಿತವಾಗಿ ಈ ಕೆಲಸವನ್ನು ಕೈಗೆ ತೆಗೆದುಕೊಳ್ಳಬೇಕಿದೆ. ದುರದೃಷ್ಟ ಏನೆಂದರೆ, ಸಮರ್ಪಕ ಸಿಬ್ಬಂದಿಯೇ ಅದಕ್ಕಿಲ್ಲ. ದೊಡ್ಡ ಆಸೆಯನ್ನು ಇಟ್ಟುಕೊಂಡು ಸ್ಥಾಪಿಸಿದ ಸಂಸ್ಥೆ ಅದು. ಜಗತ್ತಿನಲ್ಲೇ ಮೊದಲ ಯತ್ನ ಕೂಡ. ಅದಕ್ಕೆ ಸರ್ಕಾರ ಕೊಡಬೇಕಾದ ಪೋಷಣೆ ಕೊಟ್ಟಿಲ್ಲ.

ತಂತ್ರಜ್ಞಾನದಲ್ಲಿ ಸಾಕಷ್ಟು ಮುಂದುವರಿದಿದ್ದರೂ ಗೊಂದಲ ಸಾಕಷ್ಟಿವೆ.

